ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)

ಸಂ.ಸಾಆ/ಗಣಕ/ವೈವ-84/2018-19(2)

ಆಯುಕ್ತರ ಕಛೇರಿ, ಸಾರಿಗೆ ಮತ್ತು ರಸ್ತೆ ಸುರಕ್ಷತೆ,
1ನೇ ಮಹಡಿ, 'ಎ' ಬ್ಲಾಕ್, ಟಿ.ಟಿ.ಎಂ.ಸಿ. ಕಟ್ಟಡ,
ಕೆ.ಹೆಚ್. ರಸ್ತೆ ಶಾಂತಿನಗರ, ಬೆಂಗಳೂರು-27.
ದಿನಾಂಕ:03-08-2021. ದೂ:080-22214900
ಮಿಂಚಂಚೆ: transcom@nic.in.

# ಸುತ್ತೋಲೆ

ವಿಷಯ : ಸಾರಿಗೆ ಇಲಾಖೆಯ ಅಧಿಸೂಚಿತ 'ಸಕಾಲ' ಸೇವೆಗಳನ್ನು ಮತ್ತು ಆನ್‌ಲೈನ್ ವ್ಯವಸ್ಥೆಯಡಿ ಒದಗಿಸುವ ಸೇವೆಗಳನ್ನು ಕಡ್ಡಾಯವಾಗಿ ಆನ್‌ಲೈನ್ ವ್ಯವಸ್ಥೆಯಡಿ ನಿರ್ವಹಿಸುವ ಮತ್ತು ಕಛೇರಿಗಳಲ್ಲಿ ಭೌತಿಕವಾಗಿ (ಕಾಗದ) ಅರ್ಜಿಗಳ ಸ್ವೀಕೃತಿಯನ್ನು ಸ್ಥಗಿತಗೊಳಿಸುವ ಬಗ್ಗೆ.

ಉಲ್ಲೇಖ :
1) ಸರ್ಕಾರದ ಆದೇಶ ಸಂಖ್ಯೆ: ಟಿಡಿ 154 ಟಿಡಿಓ 2019, ಬೆಂಗಳೂರು, ದಿನಾಂಕ:04-03-2020.
2) ಪಿ.ಎಸ್.ಎ-ಎನ್.ಐ.ಸಿ. ರವರ ಇ-ಮೇಲ್ ಪತ್ರ ದಿನಾಂಕ:18-03-2020.
3) ಈ ಕಛೇರಿಯ ಸಮಸಂಖ್ಯೆ ಪತ್ರ ದಿನಾಂಕ: 07-04-2020.
4) ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ವರದಿ.

***

ಉಲ್ಲೇಖಿತ (1)ರ ಸರ್ಕಾರದ ಆದೇಶದಲ್ಲಿ ಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ 'ಸಕಾಲ' ಸೇವೆಗಳಲ್ಲಿ ಈಗಾಗಲೇ ಅಭಿವೃದ್ಧಿಪಡಿಸಲಾಗಿರುವ ಆನ್‌ಲೈನ್ ತಂತ್ರಾಂಶವನ್ನು ಬಳಸಿಕೊಂಡು ನೀಡಬಹುದಾದ ಸಕಾಲ ಸೇವೆಗಳಿಗೆ ಅರ್ಜಿ ಸ್ವೀಕೃತಿಗೆ ಆನ್‌ಲೈನ್ ತಂತ್ರಾಂಶದ ಬಳಕೆಯನ್ನು ಕಡ್ಡಾಯಗೊಳಿಸಿ ಭೌತಿಕವಾಗಿ ಅರ್ಜಿ ಸ್ವೀಕರಿಸುವುದನ್ನು ಕೂಡಲೇ ಸ್ಥಗಿತಗೊಳಿಸಲಾಗಿರುತ್ತದೆ.

ಉಲ್ಲೇಖಿತ (2)ರ ಪತ್ರಗಳಲ್ಲಿ ಎನ್.ಐ.ಸಿ.ರವರು ಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಸಕಾಲ ಸೇವೆಗಳನ್ನು ಕೇಂದ್ರೀಕೃತ ವೆಬ್ ಆಧಾರಿತ ವಾಹನ್-4 ಮತ್ತು ಸಾರಥಿ-4 ತಂತ್ರಾಂಶದೊಂದಿಗೆ ಸಂಯೋಜಿಸಿ ಆನ್‌ಲೈನ್ ಮೂಲಕ ಸಾರ್ವಜನಿಕರಿಗೆ ಸೇವೆಗಳನ್ನು ಒದಗಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ. ಉಲ್ಲೇಖಿತ (3)ರ ಪತ್ರದಲ್ಲಿ ರಾಜ್ಯದ ಎಲ್ಲಾ ಸಾರಿಗೆ ಕಛೇರಿಗಳಲ್ಲಿ ಆನ್‌ಲೈನ್ ತಂತ್ರಾಂಶದ ಬಳಕೆಯನ್ನು ಕಡ್ಡಾಯಗೊಳಿಸಿ ಭೌತಿಕವಾಗಿ ಅರ್ಜಿ ಸ್ವೀಕರಿಸುವುದನ್ನು ಕೂಡಲೇ ಸ್ಥಗಿತಗೊಳಿಸುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಆದೇಶಿಸಲಾಗಿತ್ತು.

ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ಮೊದಲನೇ ವರದಿಯಲ್ಲಿ ಆನ್‌ಲೈನ್ ಸೇವೆಗಳನ್ನು ಪೂರ್ಣವಾಗಿ ಆರಂಭಿಸಿದ ನಂತರವೂ, ನಾಗರಿಕರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದರ ಜೊತೆಗೆ ಇನ್ನೂ ಭೌತಿಕ (ಕಾಗದದ) ಅರ್ಜಿಗಳು, ದಾಖಲೆಗಳನ್ನು ನೀಡಬೇಕು ಮತ್ತು ಆರ್.ಟಿ.ಓ ಕೌಂಟರ್‌ಗಳಲ್ಲಿ ಶುಲ್ಕ ಪಾವತಿಸಲು ಬರಬೇಕಾಗುತ್ತದೆ. ಆರ್.ಟಿ.ಓ ಸಿಬ್ಬಂದಿಗಳು ಸಹ ಎರಡೆರಡು ಬಾರಿ ಕೆಲಸಗಳನ್ನು ಮಾಡಬೇಕಾಗುತ್ತದೆ, ಅವರು ಭೌತಿಕ ಕಡತ ಮತ್ತು ಆನ್‌ಲೈನ್ ಕಡತ ಎರಡನ್ನೂ ಸಮಾನಾಂತರವಾಗಿ ನಿರ್ವಹಿಸುತ್ತಿದ್ದಾರೆ. ಪೂರ್ಣ ಪ್ರಮಾಣದ ಆನ್‌ಲೈನ್ ವ್ಯವಸ್ಥೆ ಲಭ್ಯವಿರುವಾಗ, ಭೌತಿಕ (ಕಾಗದದ) ಅರ್ಜಿಗಳ ಮತ್ತು ದಾಖಲೆಗಳ ಸ್ವೀಕೃತಿಯನ್ನು ಮುಂದುವರಿಸಲು ಯಾವುದೇ ಕಾರಣವಿಲ್ಲ ಎಂದು ತೋರುತ್ತದೆ. ಆದ್ದರಿಂದ ಸಾರಿಗೆ ಇಲಾಖೆಯು ಆನ್‌ಲೈನ್ ವ್ಯವಸ್ಥೆ ಲಭ್ಯವಿರುವಲ್ಲಿ ದಾಖಲೆಗಳನ್ನು ಸ್ವೀಕರಿಸದಂತೆ ಸೂಚನೆಗಳನ್ನು ನೀಡುವಂತೆ ಆಯೋಗವು ಶಿಫಾರಸ್ಸು ಮಾಡಿರುತ್ತದೆ.

ಆದ್ದರಿಂದ, ರಾಜ್ಯದ ಎಲ್ಲಾ ಉಪಸಾರಿಗೆ ಆಯುಕ್ತರು ಹಾಗೂ ಹಿರಿಯ / ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಕೇಂದ್ರಿಕೃತ ವೆಬ್ ಆಧಾರಿತ ಸಾರಥಿ-4 ಮತ್ತು ವಾಹನ್-4 ತಂತ್ರಾಂಶದಲ್ಲಿ ಬರುವ ಸೇವೆಗಳಿಗೆ ಸಂಬಂಧಿಸಿದಂತೆ ಅರ್ಜಿದಾರರು ಅಪ್‌ಲೋಡ್ ಮಾಡುವ ಅರ್ಜಿ ಮತ್ತು ದಾಖಲೆಗಳು ಆನ್‌ಲೈನ್‌ನಲ್ಲಿ ಲಭ್ಯವಾಗುವುದರಿಂದ, ಆನ್‌ಲೈನ್ ತಂತ್ರಾಂಶದ ಬಳಕೆಯನ್ನು ಕಡ್ಡಾಯಗೊಳಿಸಿ ಭೌತಿಕವಾಗಿ (ಕಾಗದದ) ಅರ್ಜಿಗಳು ಮತ್ತು ದಾಖಲೆಗಳನ್ನು ಕಛೇರಿಗಳಲ್ಲಿ ಸ್ವೀಕರಿಸುವುದನ್ನು ಕೂಡಲೇ ಸ್ಥಗಿತಗೊಳಿಸಲು ಸೂಚಿಸಲಾಗಿದೆ.

04/08

ಆಯುಕ್ತರು,
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

ಇವರಿಗೆ:
ರಾಜ್ಯದ ಎಲ್ಲಾ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ / ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:
1) ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು ಮತ್ತು ಜಂಟಿ ಸಾರಿಗೆ ಆಯುಕ್ತರುಗಳ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
2) ಅಪರ ಸಾರಿಗೆ ಆಯುಕ್ತರು (ಪರಿಸರ ಮತ್ತು ಇ-ಆಡಳಿತ), ಬೆಂಗಳೂರು ರವರು ಸುತ್ತೋಲೆಯ ಪ್ರತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
4) ಕಡತಕ್ಕೆ.